# ರಾಜಕಾರಣಿ- ರಾಜನೀತಿಜ್ಞ

ಭಾರತ ಪರಕೀಯರ ಆಡಳಿತದಿಂದ, ಬಿಡುಗಡೆ ಗಳಿಸಿ, ಸ್ವತಂತ್ರವಾಗಿ, ಪ್ರಜಾಪ್ರಭುತ್ವವನ್ನು ಸ್ವೀಕರಿಸಿ ಹಲವು ದಶಕಗಳೇ ಸಂದಿವೆ. ಆದರೆ ಗಾಂಧೀಜೀಯವರ 'ಕನಸಿನ ಭಾರತ' ಇನ್ನೂ ಕನಸಾಗಿಯೇ ಉಳಿದಿದೆ. ಅಷ್ಟೇ ಅಲ್ಲ, ಅಂಥದೊಂದು ಕನಸನ್ನು ತಮ್ಮ ಮುಂದಿರಿಸಿಕೊಂಡು ಗಾಂಧೀಜೀಯಂಥವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಎಂಬುದನ್ನೂ ಮರೆಯುವ ಹಂತದಲ್ಲಿ ನಾವಿದ್ದೇವೆ. ಎಲ್ಲ ಒಳ್ಳೆಯ ವ್ಯವಸ್ಥೆಗಳ ಒಳಗೂ ಎಲ್ಲೋ ಒಂದು ಕೆಡುಕಿನ ಕಣ ಅಡಗಿಕೊಂಡಿರುತ್ತದೆ ಎಂಬ ಮಾತು ನಿಜ ವಿರಬಹುದೇನೋ. ಪ್ರಜಾಪ್ರಭುತ್ವದ ಆದರ್ಶ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡಿರುವ ಭಾರತ ಪ್ರಸ್ತುತ ಕಾಲ ಘಟ್ಟದಲ್ಲಿ ನೈತಿಕವಾಗಿ ಕುಸಿಯುತ್ತಿರುವುದೇ ಕೆಡುಕೆಂಬುದು ಮೇಲ್ನೆ ಪಡೆದಿರುವುದರಿಂದ ಎನ್ನಿಸುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ದೇಶದ ಆಡಳಿತ ಕ್ಷೇತ್ರದಲ್ಲಿ ರಾಜನೀತಿಜ್ಞರಿಗಿಂತ ರಾಜಕಾರಣಿಗಳೇ ತುಂಬಿಕೊಂಡಿರುವುದು.

'ರಾಜಕಾರಣಿ' ಎಂಬ ಮಾತು ನಮಗೆಲ್ಲ ಪರಿಚಿತವಾಗಿರುವಂಥದು. ಇಂಗ್ಲಿಷಿನ 'politician' ಎಂಬುದಕ್ಕೆ ಸಂವಾದಿಯಾಗಿರುವ ಪದವೇ 'ರಾಜಕಾರಣಿ.' ಒಂದು ಪಕ್ಷವನ್ನು ಸೇರಿಕೊಂಡೋ, ಇಲ್ಲವೇ ಸ್ವತಂತ್ರವಾಗಿದ್ದುಕೊಂಡೋ, ಚುನಾವಣೆಯಲ್ಲಿ ಸ್ಪರ್ಧಿಸಿ, 'ಹೇಗೋ' ಗೆದ್ದು, ಅಧಿಕಾರದ ಗದ್ದುಗೆಗೆ ಏರುವ ಆಕಾಂಕ್ಷೆ ಇರುವ ವ್ಯಕ್ತಿಗಳೇ ಇಂಥ ರಾಜಕಾರಣಿಗಳು. ಅಂಥವರ ಪಾಲಿಗೆ ಸಮಷ್ಟಿ ಹಿತ ಮುಖ್ಯವಾಗುವುದಿಲ್ಲ. ಆದ್ದರಿಂದಲೇ ಅವರು ನಡೆಸುವ ರಾಜಕೀಯ ಸ್ವಾರ್ಥದಿಂದ ಕಲುಷಿತವಾಗಿರುತ್ತದೆ. ದೇಶದ ಪ್ರಗತಿ, ಪ್ರಜಾಕ್ಷೇಮ- ಇಂಥವೆಲ್ಲವೂ ರಾಜ ಕಾರಣಿಗಳಿಗೆ ವೇದಿಕೆಗಳಲ್ಲಿ ಧಾರಾಳವಾಗಿ ಉಪಯೋಗಕ್ಕೆ ಬರುವ ಘೋಷಣೆಗಳಾಗಿರುತ್ತವೆಯೇ ಹೊರತು ಸಾಧಿಸಬೇಕಾದ ಧ್ಯೇಯಗಳಾಗಿರುವುದಿಲ್ಲ. ಸಿಕ್ಕ ಅವಕಾಶವನ್ನು ಸಾಧ್ಯವಾದಷ್ಟೂ ಬಳಸಿಕೊಂಡು ಸ್ವಂತ ಲಾಭವನ್ನು ಗರಿಷ್ಠ ಪ್ರಮಾಣದಲ್ಲಿ ಮಾಡಿಕೊಳ್ಳಬೇಕೆನ್ನುವ ಆತುರದಲ್ಲಿ ಅವರು ದೇಶದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತಾರೆ. ಅವರ ಪರಿವಾರ ಅವರನ್ನೇ ಅನುಸರಿಸುತ್ತದೆ; ಅನುಕರಿಸುತ್ತದೆ. ಹೀಗಾಗಿ ಬಡಪಾಯಿ ಪ್ರಜೆ- 'ರಾಮನ ರಾಜ್ಯದಲ್ಲೂ ರಾಗೀ ಬೀಸುವ ಕಷ್ಟ ತಪ್ಪುವುದಿಲ್ಲ' ಎಂದು ನಿಟ್ಟುಸಿರು ಬಿಡುವಂತಾಗುತ್ತದೆ. ಕುಮಾರವ್ಯಾಸ ವಿದುರನ ಬಾಯಲ್ಲಿ ಹೇಳಿಸಿದ- 'ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ; ಬಡವರ ಬಿನ್ನಪದ ನಿನ್ನಾರು ಕೇಳುವರು' ಎಂಬ ಸಾಲುಗಳಲ್ಲಿ 'ಅರಸು' ಎಂಬುದೊಂದನ್ನುಳಿದರೆ, ಉಳಿದುದೆಲ್ಲವೂ ಇಂದಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತಿವೆ ಎನ್ನಿಸುವುದಿಲ್ಲವೆ?

ಸ್ವಾತಂತ್ರ್ಯ ಬಂದ ತರುಣದಲ್ಲಿ ನಮ್ಮ ರಾಷ್ಟ್ರದಲ್ಲಿ ರಾಜಕಾರಣಿಗಳಿಗಿಂತ ರಾಜನೀತಿಜ್ಞರು ಮುಂಚೂಣಿಯಲ್ಲಿದ್ದರು. ಅಂಥ 'ರಾಜನೀತಿಜ್ಞ'ರಿಗೆ 'statesmen'ದೇಶವನ್ನು ಸರ್ವಾಂಗೀಣವಾಗಿ ಕಟ್ಟಬೇಕೆನ್ನುವ ಪ್ರಾಮಾಣಿಕ ಹಂಬಲವಿತ್ತು; ಮೌಲ್ಯಾಧಾರಿತ ಆಡಳಿತದಲ್ಲಿ ನಂಬಿಕೆಯಿತ್ತು. ಅಂಥ ರಾಜನೀತಿಜ್ಞರಾದ ನೇತಾರರು ತಮಗೆ ದೊರಕಿದ್ದ ಅವಕಾಶವನ್ನು ಸ್ವಂತ ಸುಖಕ್ಕಾಗಿ, ಭೋಗಕ್ಕಾಗಿ ಬಳಸದೆ, ಪ್ರಜಾಹಿತಕ್ಕಾಗಿ, ದೇಶದ ಪ್ರಗತಿಗಾಗಿ ಬಳಸುತ್ತಿದ್ದರು. ತಾವು ಬದುಕುವ ರೀತಿ ಜನರ ಪಾಲಿಗೆ ಅನುಕರಣೀಯವಾಗಿರಬೇಕೆಂಬ ಎಚ್ಚರ ಅವರಲ್ಲಿ ಸದಾ ಇರುತ್ತಿತ್ತು. ಭಗವದ್ಗೀತೆಯಲ್ಲಿ ಬರುವ- 'ಯದ್ಯದಾಚರತಿ ಶ್ರೇಷ್ಠ: ತತ್ತದೇವೇತರೋ ಜನಃ ಸ ಯತ್ ಪ್ರಮಾಣಂ ಕುರುತೇ ಲೋಕಃ ತದನುವರ್ತತೇ' (ಶ್ರೇಷ್ಠನೆನ್ನಿಸಿಕೊಂಡವನು ಯಾವುದನ್ನು ಆಚರಿಸುತ್ತಾನೋ ಅದನ್ನೇ ಇತರ ಜನರೂ ಆಚರಿಸುತ್ತಾರೆ. ಆತನು ಪ್ರಮಾಣವೆಂದು ಅಂಗೀಕರಿಸಿದ್ದನ್ನೇ ಲೋಕವು ಅನುಸರಿಸುತ್ತದೆ) ಎಂಬ ಮಾತಿನಲ್ಲಿನ ಸತ್ಯ ನಮ್ಮಲ್ಲಿದ್ದ ರಾಜನೀತಿಜ್ಞರ ಪಾಲಿಗೆ ಉಪಾದೇಯವಾಗಿತ್ತು. ಆದ್ದರಿಂದಲೇ ಅವರು ತಮ್ಮ ನೈತಿಕ ಮಟ್ಟವನ್ನು ಕಾಪಾಡಿಕೊಂಡು, ಪ್ರಜೆಗಳ ನೈತಿಕ ಪ್ರಜ್ಞೆಯನ್ನೂ ಎತ್ತರಿಸಿದ್ದರು.

ಬರ್ಕ್ ಎಂಬ ಚಿಂತಕ ರಾಜನೀತಿಜ್ಞ ಮತ್ತು ರಾಜಕಾರಣಿ- ಇವರಿಬ್ಬರ ನಡುವಣ ವ್ಯತ್ಯಾಸವನ್ನು ಅತ್ಯಂತ ಸ್ಪಷ್ಟವಾಗಿ ಗುರುತಿಸಿದ್ದಾನೆ. ಆತನ ಪ್ರಕಾರ, ರಾಜನೀತಿಜ್ಞನ ದೃಷ್ಟಿ ಭವಿಷ್ಯದ ಕಡೆಗೆ ಇದ್ದರೆ, ರಾಜಕಾರಣಿಯ ದೃಷ್ಟಿ ವರ್ತಮಾನಕ್ಕಷ್ಟೇ ಸೀಮಿತವಾಗಿರುತ್ತದೆ. ರಾಜಕಾರಣಿಗೆ ಇಂದಿನ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದು, ಮುಂದಿನ ಚುನಾವಣೆಯಲ್ಲಿ ಗೆಲ್ಲುವುದು ಮುಖ್ಯವಾಗಿರುವುದರಿಂದ ಆತ 'ಸಮಯ ಸಾಧಕ'ನಾಗುತ್ತಾನೆ. ಆದರೆ ರಾಜ ನೀತಿಜ್ಞನಿಗೆ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದಾಗಲೀ, ಮುಂದಿನ ಚುನಾವಣೆಯಲ್ಲಿ ಗೆಲುವು ಸಾಧಿಸುವುದಾಗಲೀ ಮುಖ್ಯವಾಗುವುದಿಲ್ಲ. ಆತ ಪ್ರಸ್ತುತದ ಜೊತೆ ಜೊತೆಗೇ ರಾಷ್ಟ್ರದ ಭವಿತವ್ಯವನ್ನೂ ಮನಸ್ಸಿನಲ್ಲಿಟ್ಟುಕೊಂಡು ದುಡಿಯುತ್ತಾನೆ. ಅಂಥ ರಾಜನೀತಿಜ್ಞರಿಗಾಗಿ ಕಾತರಿಸಿ, ಕಾಯುವ ಹಂತದಲ್ಲಿ ನಾವೀಗ ಇದ್ದೇವೆ.

■ ವೈನತೇಯ

## ಮಾತೇ ಮುತ್ತು

★ ಮನುಷ್ಯನು ಯಾವುದೇ ವಿಷಯವನ್ನು ದೀರ್ಘ ಕಾಲ ಚಿಂತಿಸುವಾಗ ಅದರ ಬಗ್ಗೆ ಆಸಕ್ತಿಯುಂಟಾಗುತ್ತದೆ. ನಂತರ ಅದನ್ನು ಪಡೆಯಬೇಕೆಂಬ ಹಂಬಲ ಉಂಟಾಗುತ್ತದೆ. ತನ್ನ ಹಂಬಲ ಈಡೇರದಿದ್ದಾಗ ಅಡ್ಡಿಪಡಿಸಿದವರ ಮೇಲೆ ಕೋಪ ಬರುತ್ತದೆ. ಆ ಕೋಪದಲ್ಲಿ ವಿವೇಚನೆಯನ್ನು ಕಳೆದುಕೊಳ್ಳುತ್ತಾನೆ. ವಿವೇಚನೆಯಿಲ್ಲದ ವ್ಯಕ್ತಿ ಮಾಡಬಾರದ ಅನರ್ಥ ಕಾರ್ಯದಲ್ಲಿ ತೊಡಗುತ್ತಾನೆ.

-ಭಗವದ್ಗೀತೆ

★ ನಾಳೆ ಬರುವುದು ನಮಗಿಂದೆ ಬರಲಿ, ಇಂದು ಬರುವುದು ನಮಗೀಗಲೆ ಬರಲಿ, ಆಗೀಗ ಎನ್ನದಿರೋ ಚೆನ್ನಮಲ್ಲಿಕಾರ್ಜುನ.

-ಅಕ್ಕಮಹಾದೇವಿ

★ ಕಾಮವು ವಿಷಯೋಪಭೋಗದಿಂದ ಎಂದಿಗೂ ಶಾಂತವಾಗುವುದಿಲ್ಲ. ತುಪ್ಪದ ಹವಿಸ್ಸಿನಿಂದ ಬೆಂಕಿ ಹೆಚ್ಚುವಂತೆ, ಅದು ಇನ್ನೂ ಪ್ರಬಲವಾಗುತ್ತದೆ.

-ಮಹಾಭಾರತ

★ ರಸಜ್ಞರಿಗೆ ಕಾವ್ಯ, ನಾಟಕ ಅಮೃತ. ಕಾಮಿಗಳಿಗೆ ಕಾಮಿನಿ ಅಮೃತ. ಜಿಪುಣರಿಗೆ ಹಣ ಅಮೃತ. ಸನ್ಯಾಸಿಗಳಿಗೆ ಶಾಂತಿ ಅಮೃತ.

-ಕಾವ್ಯಪ್ರಕಾಶ

★ ಜಗತ್ತಿನಲ್ಲಿ ತೀರ ಹೊಸತು ಎನ್ನುವುದು ಯಾವುದು? ನಾವು ನಮಗೆ ತಿಳಿದೋ ತಿಳಿಯದೆಯೋ, ಹಿಂದಿನ ಎಲ್ಲ ಆಲೋಚನೆಯ ಭಾರವನ್ನೂ ಹೊತ್ತಿದ್ದೇವೆ. ಆ ಭಾರದಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲ.

-ಹಾ.ಮಾ.ನಾಯಕ

★ ಶೋಷಿತನ ಶಾಪದಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಏಕೆಂದರೆ ಅವನು ಅಲ್ಲಾಹನಿಂದ ತನ್ನ ಹಕ್ಕನ್ನಷ್ಟೆ ಬೇಡುತ್ತಾನೆ. ಅಲ್ಲಾಹನು ಯಾವುದೇ ಹಕ್ಕುದಾರನನ್ನು ಅವನ ಹಕ್ಕಿನಿಂದ ವಂಚಿತಗೊಳಿಸುವುದಿಲ್ಲ.

-ಮುಹಮ್ಮದ್ ಪೈಗಂಬರ್

★ ಕ್ಷಮೆಯಿಂದ ಬರುವುದು ಶಾಶ್ವತ ಸುಖ.

-ತಿರುಕ್ಕುರಳ್

★ ಸಾಧ್ವಿಯೂ, ಪ್ರಿಯವಾದಿನಿಯೂ ಆದ ಮಡದಿ ಯಾವನಿಗಿಲ್ಲವೋ ಅವನು ಕಾಡಿಗೆ ಹೋಗುವುದು ಲೇಸು. ಅವನಿಗೆ ಮನೆ, ಕಾಡು ಒಂದೇ!

-ಭಾಗವತ

★ ಲೋಹ, ಮರ ಇವುಗಳಿಂದಾದ ಬಂಧನಗಳಿಂದ ಒಂದು ವೇಳೆ ಮಾನವನು ಬಿಡಿಸಿಕೊಳ್ಳಬಹುದು. ಆದರೆ ಮಕ್ಕಳು ಹೆಂಡತಿ ಎಂಬ ಪಾಶದಿಂದ ಎಂದಿಗೂ ಬಿಡಿಸಿಕೊಳ್ಳಲಾರನು.

-ಗರುಡ ಪುರಾಣ

★ ಹಳೆಯದು- ಹೊಸದರ ನಡುವೆ ಹೊಂದಾಣಿಕೆ ಮಾಡುವ ಕೆಲಸ ನಿಜವಾಗಿ ಮಾಡಬೇಕಾದದ್ದು.

-ಎ.ಸಿ.ಬೆನ್ಸನ್

★ ಹೊಗಳುವವ ಮೋಸಪಡಿಸಿದ್ದಾನೆ; ಇಲ್ಲವೆ ಮೋಸ ಪಡಿಸುವುದರಲ್ಲಿದ್ದಾನೆ.

-ಹಂಗೆರಿ ಗಾದೆ

★ ನಮ್ಮನ್ನು ನಾವೇ ಕ್ಷಮಿಸಿಕೊಳ್ಳೋಣವೇ? ಹಾಗಾಗದು. ಇತರರು ನಮ್ಮನ್ನು ಕ್ಷಮಿಸಬೇಕು. ಹಾಗಾಗುವ ಸಾಧ್ಯತೆ ಇರುವುದು ನಮ್ಮನ್ನು ನಾವೇ ಕ್ಷಮಿಸಲು ಶಕ್ತರಾದಾಗ ಮಾತ್ರ.

-ಡಾಗ್ ಹ್ಯಾಮರ್ ಸ್ಕೋಲ್ಡ್

★ ತಪ್ಪು ಮಾಡುವುದು ಮಾನವಗುಣ; ಕ್ಷಮಿಸುವುದು ದೈವೀಗುಣ!

-ಅಲೆಕ್ಸಾಂಡರ್ ಪೋಪ್